	Cottage locations.
13.	Construction of new rooms at Gandhi Nilaya.
14.	Refurbishment of Gandhi Nilaya Guest House.
15.	Refurbishment of Nehru Nilaya Guest House.
16.	Refurbishment of Horticultural Guest House.
17.	Refurbishment of rooms at Hotel Mayura Pinetop.

ತುಮಕೂರು ಜಿಲ್ಲೆಯಲ್ಲಿ ವಸತಿ ಬಡಾವಣೆಯ ನಕ್ಷೆ ಮಂಜೂರಾತಿ ವಿಳಂಬ

73(60): ಶ್ರೀ ಡಿ. ಕೆ. ಶಿವಕುಮಾರ್ (ಕನಕಪುರ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಮಕೂರು ಜಿಲ್ಲೆ ತುಮಕೂರು ನಗರ ವ್ಯಾಪ್ತಿಯಲ್ಲಿನ ಉಪ್ಪಾರಹಳ್ಳಿ ಗ್ರಾಮದ ಸ.ನಂ 23/1ರ 9 ಎಕರೆ ಜಮೀನನ್ನು ಭೂ ಸ್ವಾಧೀನ ಮಾಡಿಕೊಳ್ಳಲು ಪ್ರಯತ್ನಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು?

ಆ) ಈ ಜಮೀನಿನ ಭೂ ಮಾಲೀಕರು ವಸತಿ ಬಡಾವಣೆಯ ನಕ್ಷೆ ಮಂಜೂರಾತಿಗಾಗಿ ಸಂಬಂಧಪಟ್ಟ ಪ್ರಾಧಿಕಾರದಲ್ಲಿ ಕಳೆದ ಮೂರು ವರ್ಷಗಳಿಂದ ಪ್ರಸ್ತಾವನೆಯನ್ನು ಸಲ್ಲಿಸಿದ್ದರೂ ಇದುವರೆವಿಗೂ ಮಂಜೂರಾತಿ ಮಾಡದಿರಲು ಕಾರಣವೇನು?

ಇ) ನಗರಾಭಿವೃದ್ಧಿ ಪ್ರಾಧಿಕಾರದ ನಿಯಮದಡಿ ಯಾವುದೇ ವ್ಯಕ್ತಿ/ಸಂಸ್ಥೆ ನಕ್ಷೆ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದ್ದಲ್ಲಿ ಎಷ್ಟು ಸಮಯದಲ್ಲಿ ಮಂಜೂರಾತಿ ನೀಡಲು ನಿಯಮದಲ್ಲಿ ಅವಕಾಶವಿದೆ?

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ ಸಚಿವರು):

ಅ) ಬಂದಿದೆ. ತುಮಕೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಾರಹಳ್ಳಿ ಗ್ರಾಮದ ಸ.ನಂ. 23/1ಎ ರ 9.00 ಎಕರೆ ಜಮೀನನ್ನು ಸಾರ್ವಜನಿಕ ಉದ್ದೇಶಕ್ಕೆ ಭೂ ಸ್ವಾಧೀನಪಡಿಸಿಕೊಳ್ಳಲು ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿಸಂಖ್ಯೆ 2537-39/2010, ದಿನಾಂಕ: 30-09-2010 ರ ಆದೇಶದಲ್ಲಿ ಭೂ ಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಿ 3 ತಿಂಗಳ ಒಳಗಾಗಿ ಪ್ರಕ್ರಿಯೆ ಪೂರೈಸಬೇಕೆಂಬ ನಿರ್ದೇಶನವಿದೆ. ಮಾನ್ಯ

ನ್ಯಾಯಾಲಯದ ಆದೇಶದಂತೆ ಸಂಬಂಧಪಟ್ಟ ಉಪ ವಿಭಾಗಾಧಿಕಾರಿ ತುಮಕೂರು ಇವರಿಗೆ ಸ.ನಂ.23/1ಎ ಜಮೀನನ್ನು ಭೂಸ್ವಾಧೀನಪಡಿಸಿ ಕೊಳ್ಳಲು ತಿಳಿಸಲಾಗಿದೆ. ಉಪ ವಿಭಾಗಾಧಿಕಾರಿಯವರಿಗೆ

1. ಆಯುಕ್ತರು ಮಹಾನಗರ ಪಾಲಿಕೆ, ತುಮಕೂರು ರವರು ನಗರ ಪಾಲಿಕೆಯ ವಲಯ ಕಛೇರಿಗಳನ್ನು ನಿರ್ಮಿಸಲು ಸದರಿ ಜಮೀನಿನಲ್ಲಿ 2 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ, ಹಾಗೂ,

2. ಅಧೀಕ್ಷಕ ಇಂಜಿನೀಯರ್, ಬೆಸ್ಕಾಂ ತುಮಕೂರು ರವರು ವಿಭಾಗೀಯ ಕಛೇರಿ ವಿಭಾಗೀಯ ಉಗ್ರಾಣ ಇತರೆ ಕಛೇರಿ ಕಟ್ಟಡ ನಿರ್ಮಾಣದ ಉದ್ದೇಶಕ್ಕಾಗಿ ಇದೇ ಜಮೀನಿನಲ್ಲಿ 7.00 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಭೂ ಸ್ವಾಧೀನ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ.

ಆ) ದಿ ಸ್ಟಾಂಡರ್ಡ್ ಬ್ರಿಕ್ ಅಂಡ್ ಟೈಲ್ಸ್ ಕಂಪನಿ ಇವರಿಗೆ ದಿನಾಂಕ:28.3.1953 ರಂದು ಕೈಗಾರಿಕಾ ಉದ್ದೇಶಕ್ಕಾಗಿ ಸರ್ಕಾರವು ಸ.ನಂ 23/1ಎ ರ ಜಮೀನನ್ನು ಭೂ ಸ್ವಾಧೀನ ಪಡಿಸಿಕೊಂಡು ಹಂಚಿಕೆ ಮಾಡಲಾಗಿದೆ. ತಮ್ಮ ಕಂಪನಿಯನ್ನು ಸ್ಥಗಿತಗೊಳಿಸಿ ನಗರಸಭೆಗೆ ಅರ್ಜಿ ಸಲ್ಲಿಸಿ ತಮ್ಮ ಜಮೀನಿನಲ್ಲಿ ಹಳೇ ಕಟ್ಟಡವನ್ನು ಕೆಡವಿ ವಾಸದ ಉದ್ದೇಶಕ್ಕೆ ಉಪಯೋಗಿಸಲು ಕೋರಿದ್ದರ ಮೇರೆಗೆ ಕರ್ನಾಟಕ ಭೂ ಸ್ವಾಧೀನ ಕಾಯ್ದೆ, 1894 ರ ಕಲಂ 44(ಎ) ರಡಿಯಲ್ಲಿ ಸರ್ಕಾರವು ಸ್ವಾಧೀನಪಡಿಸಿಕೊಂಡಿರುವ ಜಮೀನನ್ನು ಅದೇ ಉದ್ದೇಶಕ್ಕೆ ಉಪಯೋಗಿಸಿಕೊಳ್ಳುವಂತೆ ದಿನಾಂಕ: 24-12-2006 ರಂದು ಸದರಿ ಕಂಪೆನಿಗೆ ತಿಳುವಳಿಕೆ ನೀಡಲಾಗಿದೆ.

ತದನಂತರ ದಿನಾಂಕ: 21-7-2008 ರ ಪತ್ರದಲ್ಲಿ ಸದರಿ ಜಮೀನನ್ನು ಮೆ॥ ಮಂಜುನಾಥ ಪ್ಯಾಕೇಜಿಂಗ್ ಪ್ರೈ.ಲಿ., ಸಂಸ್ಥೆಯವರಿಗೆ ಕರ್ನಾಟಕ ಭೂ ಸ್ವಾಧೀನ ಕಾಯ್ದೆ, 1894 (ಕಂಪನಿ) ನಿಯಮಗಳು, 1973 ರ ನಿಯಮ 8 ರಲ್ಲಿನ ಷರತ್ತನ್ನು ಕಟ್ಟುನಿಟ್ಟಾಗಿ ಪೂರೈಸಬೇಕೆಂಬ ಷರತ್ತಿನೊಂದಿಗೆ ಮಾರಾಟ ಮಾಡಲು ಅನುಮತಿ ನೀಡಲಾಗಿದೆ.

ದಿನಾಂಕ: 30-04-2009 ರಂದು ಸ.ನಂ. 23/1ಎ ರ ಮಾಲೀಕರು ಪಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿ ತಮ್ಮ ಜಮೀನಿಗೆ ವಸತಿ ವಿನ್ಯಾಸ ಅನುಮೋದನೆಯನ್ನು ನೀಡಬೇಕೆಂದು ಕೋರಿರುತ್ತಾರೆ. ಈ ಸಂಬಂಧ ಕೆಲವು ದಾಖಲೆಗಳನ್ನು ಒದಗಿಸಬೇಕೆಂದು ದಿನಾಂಕ: 28.5.2009 ರಂದು

ಪ್ರಾಧಿಕಾರದಿಂದ ಅರ್ಜಿದಾರರಿಗೆ ಪತ್ರ ಬರೆಯಲಾಗಿರುತ್ತದೆ. ಸಂಬಂಧಿಸಿದ ಯಾವುದೇ ಮಾಹಿತಿಯನ್ನು ಅರ್ಜಿದಾರರು ನೀಡಿರುವುದಿಲ್ಲ. ಆದ್ದರಿಂದ ಬಡಾವಣೆ ನಕ್ಷೆ ಮಂಜೂರಾತಿ ಮಾಡಿರುವುದಿಲ್ಲ.

ಇ) ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 32(1) ರಂತೆ ವ್ಯಕ್ತಿ/ಸಂಸ್ಥೆಯವರು ಖಾಸಗಿಯಾಗಿ ವಿನ್ಯಾಸಅನುಮೋದನೆ ನೀಡಲು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿದ ನಂತರ, ಅರ್ಜಿಯಲ್ಲಿರುವ ಎಲ್ಲಾ ಮಾಹಿತಿಗಳು ನಿಖರವಾಗಿದ್ದು, ಅರ್ಜಿಯೊಂದಿಗೆ ಅಗತ್ಯವಾಎ ಎಲ್ಲಾ ದಾಖಲೆಗಳನ್ನು ಸಲ್ಲಿಸಿದ್ದಲ್ಲಿ ವಿನ್ಯಾಸವು ವಲಯ ನಿಯಮಾವಳಿಗಳ ಪ್ರಕಾರ ಸರಿಯಿದ್ದಲ್ಲಿ ಆರು ತಿಂಗಳೊಳಗಾಗಿ ವಿನ್ಯಾಸ ಅನುಮೋದನೆ ನೀಡಬೇಕಾಗಿರುತ್ತದೆ.

ಆಸರೆ ಯೋಜನೆಯಲ್ಲಿ ಮನೆಗಳ ನಿರ್ಮಾಣ

74(170): ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಆಸರೆ ಯೋಜನೆಯಲ್ಲಿ ಎಷ್ಟು ಸಂಖ್ಯೆಯ ಮನೆಗಳನ್ನು ನಿರ್ಮಿಸಲು ಕರ್ನಾಟಕ ಭೂ ಸೇನಾ ನಿಗಮಕ್ಕೆ ಅನುಮತಿ ನೀಡಲಾಗಿದೆ?

ಆ) ಈವರೆವಿಗೆ ಭೂ ಸೇನಾ ನಿಗಮಕ್ಕೆ ಎಷ್ಟು ಅನುದಾನವನ್ನು ಯಾವ ಲೆಕ್ಕಶೀರ್ಷಿಕೆಯಿಂದ ಬಿಡುಗಡೆಗೊಳಿಸಲಾಗಿದೆ?

ಇ) ಭೂ ಸೇನಾ ನಿಗಮವು ಈವರೆಗೆ ಎಷ್ಟು ಮನೆಗಳ ಕಾಮಗಾರಿಗಳನ್ನು ಪೂರ್ತಿಗೊಳಿಸಿದೆ?

ಈ) ಭೂ ಸೇನಾ ನಿಗಮವು ನಿರ್ಮಿಸಿರುವ ಎಷ್ಟು ಮನೆಗಳನ್ನು ಫಲಾನುಭವಿಗಳಿಗೆ ಹಸ್ತಾಂತರಿಸಲಾಗಿದೆ?

ಶ್ರೀ ವಿ. ಸೋಮಣ್ಣ (ವಸತಿ ಸಚಿವರು):

ಅ) ಸರ್ಕಾರದಿಂದ ಕರ್ನಾಟಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿಯಮಿತಕ್ಕೆ (ಕೆ.ಆರ್.ಐ.ಡಿ.ಎಲ್) (ಈ ಹಿಂದಿನ ಕರ್ನಾಟಕ ಭೂ ಸೇನಾ ನಿಗಮ) 98 ಸ್ಥಳಗಳಲ್ಲಿ ಒಟ್ಟಾರೆ 11,876 ಮನೆಗಳ ನಿರ್ಮಾಣ ಕಾರ್ಯವನ್ನು ವಹಿಸಲಾಗಿದೆ.

ಆ) ಲೆಕ್ಕ ಶೀರ್ಷಿಕೆ 8235-11-111-0-02 (Public Contribution to the Calamity Relief) ಅಡಿಯಲ್ಲಿ ಕರ್ನಾಟಕ